ಮಾನ್ಯ ಸದಸ್ಯರ ಕಳಕಳಿ ಏನು ಇದೆ ಅದು ನನಗೆ ಗೊತ್ತಿದೆ. ಈ ಒಂದು ನಗರಸಭೆ ವ್ಯಾಪ್ತಿಯಲ್ಲಿರುವ ನಿವೇಶನಗಳು ರೆವಿನ್ಯೂ ಇಲಾಖೆ ವ್ಯಾಪ್ತಿಯಲ್ಲಿ ಬರುತ್ತದೆ. ಅವರು ಹೇಳಿದಂತೆ ನಾಗರೀಕರು ರೆವಿನ್ಯೂ ನಿವೇಶನಗಳಲ್ಲಿ ಕಟ್ಟಡಗಳನ್ನು ಕಟ್ಟಿದ್ದಾರೆ. ಆ ಬಗ್ಗೆ ನಾನು ಸವಿಸ್ತಾರವಾದ ವರದಿಯನ್ನು ತರಿಸಿಕೊಂಡು ಅಲ್ಲಿ ಮನೆಗಳನ್ನು ನಾಗರೀಕರು ಏನು ಕಟ್ಟಿದ್ದಾರೆ. ಅದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ಮಾಡಿ ಅವರಿಗೆ ಅನುಕೂಲ ಮಾಡಿಕೊಡುತ್ತೇನೆ.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿನ ರೇಷ್ಮೆ ಫಾರಂಗಳ ಕಾರ್ಯ ನಿರ್ವಹಣೆ.

221(2475)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕೃಷಿ ಇಲಾಖೆಯ ರೇಷ್ಮೆ ಫಾರಂಗಳು ಎಷ್ಟಿವೆ? ಅವುಗಳಲ್ಲಿ ಲಾಭದಲ್ಲಿರುವುದೆಷ್ಟು; ನಷ್ಟದಲ್ಲಿ ಇರುವುದೆಷ್ಟು?

ಆ) ಕಳೆದ ಒಂದು ವರ್ಷ ಅವಧಿಯಲ್ಲಿ ಈ ಫಾರಂಗಳಲ್ಲಿ ಎಷ್ಟು ಜನರಿಗೆ ತರಬೇತಿ ನೀಡಲಾಗಿದೆ. ನಷ್ಟದಲ್ಲಿರುವ ರೇಷ್ಮೆ ಫಾರಂಗಳನ್ನು ಖಾಸಗಿಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ಇದ್ದಲ್ಲಿ ಈ ನಿಟ್ಟಿನಲ್ಲಿ ಹಾಕಿಕೊಳ್ಳಲಾಗಿರುವ ಯೋಜನೆ ಏನು?

ಈ) ವಯಸ್ಕರಿಗೆ ರೇಷ್ಮೆ ಫಾರಂಗಳಲ್ಲಿ ತರಬೇತಿಯನ್ನು ನೀಡಲು ಯಾವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ?

ಶ್ರೀ ಎಂ.ಮಹಾದೇವ್ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ರೇಷ್ಮೆ ಕೃಷಿ ಕ್ಷೇತ್ರಗಳು : 13

ಎಲ್ಲಾ ರೇಷ್ಮೆ ಕೃಷಿ ಕ್ಷೇತ್ರಗಳು ನಷ್ಟದಲ್ಲಿ ನಡೆಯುತ್ತಿವೆ.

ಆ)) ರೇಷ್ಮೆ ಕೃಷಿ ಕ್ಷೇತ್ರ ತಾಂಡವಪುರದ ಮಹಿಳಾ ಪ್ರಾತ್ಯಕ್ಷತಾ ಕೇಂದ್ರದಲ್ಲಿ 165 ಮಹಿಳಾ ರೇಷ್ಮೆ ಬೆಳೆಗಾರರಿಗೆ ತರಬೇತಿ ನೀಡಲಾಗಿದೆ. ರೇಷ್ಮೆ ಕೃಷಿ ಕ್ಷೇತ್ರಗಳ ಅಭಿವೃದ್ಧಿ

ಕಂಪನಿ ಪ್ರಾರಂಭಿಸುವುದು ಕೃಷಿಕ್ಷೇತ್ರಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡುವುದು ಹಾಗೂ ಕೃಷಿ ಕ್ಷೇತ್ರಗಳ ಖಾಸಗೀಕರಣ ಮಾಡುವ ವಿಷಯಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ರೇಷ್ಮೆ ಕೃಷಿ ಪದವೀಧರರನ್ನು ಷೇರು ಬಂಡವಾಳದಾರರಾಗಿ ಮಾಡಿ ಕೃಷಿ ಕ್ಷೇತ್ರಗಳು ಸ್ವಾವಲಂಬಿ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸುವಂತೆ ಯೋಚಿಸಲಾಗುತ್ತಿದೆ.

ಈ) ಪ್ರತ್ಯೇಕ ತರಬೇತಿ ಶಾಲೆಗಳನ್ನು ಪ್ರಾರಂಭಿಸಿರುವ ಕಾರಣ ರೇಷ್ಮೆ ಕ್ಷೇತ್ರಗಳಲ್ಲಿ ತರಬೇತಿ ಒದಗಿಸುವ ಬದಲು ತರಬೇತಿ ಶಾಲೆಗಳಲ್ಲಿ ತರಬೇತಿ ಒದಗಿಸಲಾಗುತ್ತಿದೆ.

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆ ಮತ್ತು ಚಾಮರಾಜನಗರದಲ್ಲಿರತಕ್ಕಂಥ ಎಲ್ಲಾ ಫಾರಂಗಳೂ ನಷ್ಟದಲ್ಲಿವೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ಇವು ಯಾವ ಕಾರಣಕ್ಕಾಗಿ ನಷ್ಟ ಅನುಭವಿಸುತ್ತಿವೆ? ಹಿಂದೆ ಈ ಫಾರಂಗಳು ನಷ್ಟ ಅನುಭವಿಸುತ್ತಿರಲಿಲ್ಲ. ಈಗ ಏಕಾಏಕಿ ಯಾವ ಕಾರಣಕ್ಕಾಗಿ ನಷ್ಟ ಅನುಭವಿಸುತ್ತಿವೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಮತ್ತೆ ಈ ರೇಷ್ಮೆ ಕೃಷಿ ಕೇಂದ್ರಗಳು ಏನು ಇವೆ ಇಲ್ಲಿ ತರಬೇತಿ ಕೊಡುವುದಕ್ಕೆ ಸ್ಕೋಪ್ ಇದ್ದರೂ ಸಹ ನಾವು ಅಲ್ಲಿ ತರಬೇತಿ ಕೊಡುವುದಿಲ್ಲ. ಬೇರೆ ಕಡೆ ಕೊಡುತ್ತೇವೆಂದು ಹೇಳುತ್ತಾರೆ. ತಮಗೆ ಗೊತ್ತು ರೈತರು ಯಾವುದನ್ನು ನೋಡುತ್ತಾನೆ ಅದನ್ನು ಅವನು ನಂಬುತ್ತಾನೆ. ಅಲ್ಲಿ ತರಬೇತಿ ಕೊಡಿ ಅಂದರೆ ನಾವು ಬೇರೆ ಕಡೆ ತರಬೇತಿ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ಈ ಬಗ್ಗೆ ಮಾನ್ಯಮಂತ್ರಿಗಳು ತಿಳಿಸಬೇಕು. ನಷ್ಟದಲ್ಲಿರತಕ್ಕಂಥ ಫಾರಂಗಳನ್ನು ಖಾಸಗೀಕರಣ ಮಾಡುತ್ತೇವೆಂದು ಎರಡು ವರ್ಷಗಳಿಂದ ಹೇಳುತ್ತಲೇ ಬಂದಿದ್ದಾರೆ. ಕಳೆದ ವರ್ಷ ಸಹ ಇದೇ ಪ್ರಶ್ನೆಗೆ ಇದೇ ಉತ್ತರ ಬಂದಿದೆ. ಖಾಸಗೀಕರಣದ ಬಗ್ಗೆ ಇದುವರೆಗೂ ಯಾವುದೇ ಕಾರ್ಯಕ್ರಮ ಜಾರಿಯಾಗಿಲ್ಲ. ಆಮೇಲೆ ಮೈಸೂರಿನಲ್ಲಿ ಕೇಂದ್ರಿಯ ರೇಷ್ಮೆ ಸಂಶೋಧನಾ ಸಂಸ್ಥೆ ಎಂದು ಇದೆ. ಅವರು ಈ ನಷ್ಟದಲ್ಲಿರತಕ್ಕಂಥ ಫಾರಂಗಳನ್ನು ನಾವು ಡೆಮಾನ್‌ಸ್ಟ್ರೇಷನ್ ಪ್ಲಾಂಟ್‌ಗಳನ್ನಾಗಿ ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆಂದು ಹೇಳುತ್ತಿದ್ದಾರೆ. ಇಲಾಖೆ ಈ ಬಗ್ಗೆ ಸಿದ್ಧವಾಗಿದೆಯೇ ಎನ್ನುವುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎಂ.ಮಹದೇವ್:(ರೇಷ್ಮೆ ಸಚಿವರು): ಮಾನ್ಯ ಅಧ್ಯಕ್ಷರೇ, ಈ ಕೇಂದ್ರಗಳು ಸೇವೆ ಮಾಡಲಿಕ್ಕೆ ಇರತಕ್ಕಂಥಾದ್ದು. ಅಲ್ಲಿ ರೈತರಿಗೆ ಕಡ್ಡಿ ಕೊಡತಕ್ಕಂಥಾದ್ದು, ತರಬೇತಿ ಕೊಡತಕ್ಕಂಥಾದ್ದು, ರೈತರಿಗೆ ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡಲು ಅನುಕೂಲ ಮಾಡಿಕೊಡಲು ನಾವು ರೇಷ್ಮೆ ಫಾರಂಗಳನ್ನು ಇಟ್ಟುಕೊಂಡಿದ್ದೇವೆ. ಈ ಫಾರಂಗಳು ಲಾಭದಾಯಕವಾದ ಉತ್ಪನ್ನಗಳನ್ನು ಮಾಡಲಿಕ್ಕೆ ಇಲ್ಲ. ಈ ಫಾರಂಗಳು ಸೇವಾ

ಕೇಂದ್ರಗಳಾಗಿವೆ. ಈ ರೇಷ್ಮೆ ಬೆಳೆಗೆ ಏನೇನು ಅನುಕೂಲ ಆಗಬೇಕೋ ಅದನ್ನು ವ್ಯವಸ್ಥೆ ಮಾಡಿಕೊಡುವುದಕ್ಕೆ ನಾವು ಈ ಫಾರಂಗಳನ್ನು ಇಟ್ಟುಕೊಂಡಿದ್ದೇವೆ. ಆಮೇಲೆ ರೇಷ್ಮೆ ಫಾರಂಗಳನ್ನು ಖಾಸಗೀಯವರಿಗೆ ಕೊಡುವ ಬಗ್ಗೆ. ಈ ಫಾರಂಗಳಲ್ಲಿ ನಮಗೆ ಬೇಕಾಗಿರತಕ್ಕಂಥ ಜಾಗ 5-10 ಎಕರೆ ಮಾತ್ರ. ಆದರೆ ಕೆಲವು ಕಡೆ 150 ಎಕರೆ ಜಾಗ ಇದೆ. ಕೆಲವು ಕಡೆ 20 ಎಕರೆ ಇದೆ. ಈ ಬಗ್ಗೆ ಸರ್ಕಾರ ಒಂದು ಆಲೋಚನೆ ಮಾಡುತ್ತಿದೆ. ಈ ಬಗ್ಗೆ ನಾವು ಶೀಘ್ರದಲ್ಲಿಯೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುವವರಿದ್ದೇವೆ. ಎಲ್ಲೆಲ್ಲಿ ಬೋರ್‌ವೆಲ್‌ಗಳು ಇವೆ, ಎಲ್ಲಿ ಉತ್ತಮವಾದ ರೇಷ್ಮೆ ಬೆಳೆಯತಕ್ಕ ಕಡ್ಡಿ ಭೂಮಿ ಇದೆ. ಅವುಗಳಿಲ್ಲವನ್ನೂ ನಾವು ಈಗ ಎನು ನಿರುದ್ಯೋಗ ಯುವಕರು ಇದ್ದಾರೆ, ಎಂಎಸ್ಸಿ ಸಿರಿಕಲ್ಚರ್, ಬಿಎಸ್ಸಿ ಸಿರಿಕಲ್ಚರ್ ಮಾಡಿಕೊಂಡಿರುವವರು ಇದ್ದಾರೆ ಮತ್ತು ಇದರ ಜೊತೆಗೆ ವಿದ್ಯಾವಂತರು ಮತ್ತು ಅವಿದ್ಯಾವಂತ ಯುವಕರು ಯಾರು ಇದ್ದಾರೆ ಅವರಿಗೆ ಲೀಸ್ ಬೇಸಿಸ್ ಮೇಲೆ ಇಂತಹ ಫಾರಂಗಳನ್ನು ಕೊಡಲಿಕ್ಕೆ ಯೋಚನೆ ಮಾಡುತ್ತಿದ್ದೇವೆ. ಇದರಿಂದ ಅವರಿಗೆ ಉದ್ಯೋಗಾವಕಾಶವನ್ನು ಕೊಟ್ಟಂತೆ ಆಗುತ್ತದೆ ಮತ್ತು ಅವರಿಗೆ ಆರ್ಥಿಕವಾಗಿ ಸಹಾಯ ಮಾಡಿದಂತೆ ಆಗುತ್ತದೆ. ಅದಕ್ಕೋಸ್ಕರ ಕೆಲವು ಫಾರಂಗಳನ್ನು ಎಲ್ಲಿ ನಮಗೆ ಅವಶ್ಯಕತೆ ಇಲ್ಲವೋ ಅಂತಹ ಕಡೆಗಳಲ್ಲಿ ವಿದ್ಯಾವಂತರು ಆಗಲಿ ಅಥವಾ ಅವಿದ್ಯಾವಂತರಾಗಿರಲಿ ಅವರಿಗೆ ಕೋ ಆಪರೇಟಿವ್ ಬೇಸಿಸ್ ಮೇಲೆ ಸರ್ಕಾರ ಕೊಡಬೇಕೆನ್ನುವ ವಿಚಾರ ಮಾಡುತ್ತಿದ್ದೇವೆ. ಈ ವಿಷಯವನ್ನು ನಾವು ಕ್ಯಾಬಿನೆಟ್ ಮುಂದೆ ಇಟ್ಟು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಎಸ್.ಗುರುಸ್ವಾಮಿ: ಅಲ್ಲಿಯೇ ರೇಷ್ಮೆ ಬೆಳೆದು ಲಾಭ ಮತ್ತು ನಷ್ಟವಿಲ್ಲದಂತೆ ನಡೆಸುತ್ತಿದ್ದ ಫಾರಂಗಳು ಇವು. ಹಿಂದೆ ಲಾಭ ಬರುತ್ತಿತ್ತು. ಈಗ ಏಕೆ ನಷ್ಟದಲ್ಲಿವೆ? ನಿನ್ನೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ ಬರಗಾಲಕ್ಕೆ ನನ್ನ ರೇಷ್ಮೆ ಇಲಾಖೆ ಚಿನ್ನದ ಗಣಿ ಎಂದು ಇಲ್ಲಿ ನಷ್ಟತೋರಿಸಿ ಬರಗಾಲ ಹೇಗೆ ಹೋಗುತ್ತದೆ? ದಯಮಾಡಿ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಂ.ಮಹದೇವ್: ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ್ದೇನೆ ಅವು ಕಮರ್ಷಿಯಲ್ ಫಾರಂಗಳು ಅಲ್ಲ ಎಂದು, ಅವು ಸೇವಾ ಕೇಂದ್ರಗಳು. ರೈತರಿಗೆ ಸಹಾಯ ಮಾಡಲಿಕ್ಕೆ ಆ ಕೇಂದ್ರಗಳು ಇವೆಯೇ ಹೊರತು ಬೇರೆ ಉದ್ದೇಶಕ್ಕೆ ಇಲ್ಲ. ಎರಡು ಮೂರು ಕಡೆ ರೇಷ್ಮೆ ಫಾರಂಗಳಲ್ಲಿ ರೇಷ್ಮೆ ತರಬೇತಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ. ನಾವು ರೇಷ್ಮೆ ಫಾರಂಗಳನ್ನು ನಿರ್ವಹಣೆ ಮಾಡುವುದಕ್ಕೆ ಕೆಲವು ಸಮಸ್ಯೆಗಳು ಇವೆ. ಅಲ್ಲಿ ಯಾವ ಕೆಲಸಗಾರರನ್ನು ಗುತ್ತಿಗೆ ಆಧಾರದ ಮೇಲೆ ಆಗಲಿ ಅಥವಾ ದಿನಗೂಲಿ ಆಧಾರದ ಮೇಲೆ ಆಗಲಿ ನೇಮಕ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ.

ಗಂಗಾ.೪೦ ಎಎಂ

ಆ ಬಗ್ಗೆ ಸರಕಾರವು ಪರಿಶೀಲನೆ ಮಾಡುತ್ತಾ ಇದೆ. ತಾವುಗಳು ಹಿಂದೆ ಲಾಭದಲ್ಲಿ ಫಾರ್ಮ್ ನಡೆಯುತ್ತಿದ್ದು ಈಗ ನಡೆಯುತ್ತಿಲ್ಲವೆಂದು ಹೇಳಿದ್ದೀರಿ. ಇದು ಕಮರ್ಷಿಯಲ್ ಸಂಸ್ಥೆಯಲ್ಲ ಇದೊಂದು ಸೇವಾ ಸಂಸ್ಥೆ.

ಶ್ರೀ ಎ.ಎರ್.ಕೃಷ್ಣಮೂರ್ತಿ: ಮಾನ್ಯ ಸಚಿವರು ಮಾನ್ಯ ಗುರುಸ್ವಾಮಿಯವರ ಪ್ರಶ್ನೆಗೆ ಉತ್ತರಿಸುತ್ತಾ ರೇಷ್ಮೆ ಉದ್ಯಮವು ನಷ್ಟದಲ್ಲಿದೆ ಎಂಬುದನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಈ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದಂಥ ಕೂಲಿಕಾರ್ಮಿಕರು ಏನಿದ್ದರು, ಅವರೆಲ್ಲರನ್ನೂ ಕೂಡ ಸರಕಾರದವರು ಸೂಪರ್‌ನ್ಯೂಮರಿ ಹುದ್ದೆಗೆ ಅವರಿಗೆ ಅವಕಾಶ ಮಾಡಿಕೊಟ್ಟು ಅಲ್ಲಿ ಕೆಲಸ ಮಾಡುತ್ತಿದ್ದಂಥವರೆಲ್ಲರನ್ನೂ ಬೇರೆ ಇಲಾಖೆಗೆ ವರ್ಗಾವಣೆ ಮಾಡಿರತಕ್ಕಂಥ ಹಿನ್ನೆಲೆಯು ನಮಗೆ ಕಂಡು ಬರುತ್ತಾ ಇದೆ. ಉದಾಹರಣೆಗೆ ನಮ್ಮ ಚಾಮರಾಜ ನಗರದಲ್ಲಿ ಬಹುತೇಕ ರೇಷ್ಮೆ ಕೃಷಿ ಫಾರಂಗಳಲ್ಲಿ ಯಾವುದೇ ಪರಿಣಿತ ಸಿಬ್ಬಂದಿ ಇಲ್ಲದೆ ಅಲ್ಲಿ ರೇಷ್ಮೆ ಬೆಳೆಯತಕ್ಕಂಥಾದ್ದರಲ್ಲಿ ಹಿನ್ನಡೆ ಆಗಿದೆ ರೇಷ್ಮೆ ಕೃಷಿ ತರಬೇತಿ ಕೇಂದ್ರಗಳಲ್ಲಿ ಟ್ರೈನಿಂಗ್ ಪಡೆದುಕೊಂಡಂಥವರು ಬಹಳಷ್ಟು ಜನರಿದ್ದಾರೆ. ಅವರಿಗೆ ಒಂದು ಅವಕಾಶವನ್ನು ಮಾಡಿಕೊಟ್ಟು ರೇಷ್ಮೆ ಕ್ಷೇತ್ರವನ್ನು ಒಳ್ಳೆಯ ರೀತಿಯಲ್ಲಿ ಮುನ್ನೆಡೆಸಲು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ ಈ ಕೇಂದ್ರಗಳು ಬರೀ ಸೇವಾ ಕೇಂದ್ರಗಳು ಆಗಿದ್ದ ಮೇಲೆ, ಅವರು ಕೊಟ್ಟ ಉತ್ತರದಲ್ಲಿ ಎಲ್ಲಾ 13 ಕೇಂದ್ರಗಳು ಕೂಡ ನಷ್ಟದಲ್ಲಿವೆ ಎಂದು ಏತಕ್ಕಾಗಿ ಕೊಟ್ಟಿದ್ದಾರೆ? ಇಂಥ ತೊಡಕುಗಳು ಬೇಕಾದಷ್ಟು ಆಗುತ್ತಿದ್ದು ಅದನ್ನು ಸರಕಾರದವರು ಕಂಟ್ರೋಲ್ ಮಾಡಬೇಕು. ನಿಜವಾಗಿಯೂ ಸೇವಾ ಕೇಂದ್ರಗಳಾಗಿರುವುದರಿಂದ ಸರಕಾರಕ್ಕೆ ಅವುಗಳಿಂದ ಲಾಭವಿಲ್ಲವೆಂದ ಹಾಗೆ ಆಯಿತು. ಇದರ ಮೂಲಕ ಸರಕಾರದಿಂದ ಖರ್ಚು ಮಾಡಿ ಜನರಿಗೆ ಅನುಕೂಲ ಮಾಡಿಕೊಡುತ್ತೀರಿ. ಪ್ರಶ್ನೆ ಕೇಳಿದಂಥ ಸಂದರ್ಭದಲ್ಲಿ ಉತ್ತರವಾಗಿ ನಷ್ಟದಲ್ಲಿದೆ ಎಂಬ ತಪ್ಪು ಮಾಹಿತಿಯನ್ನು ಸದನಕ್ಕೆ ಏತಕ್ಕೆ ಕೊಟ್ಟಿದ್ದೀರಿ?

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಸಚಿವರು ರಾಜ್ಯದಲ್ಲಿ 13 ರೇಷ್ಮೆ ಕೃಷಿ ತರಬೇತಿ ಕೇಂದ್ರಗಳಿವೆ ಎಂದು ಹೇಳಿದ್ದಾರೆ. ಆ ಕೇಂದ್ರಗಳು ಯಾವುವು ಎಂದು ಉತ್ತರದಲ್ಲಿ ತಿಳಿಸಿಲ್ಲ. ನಮ್ಮ ಕ್ಷೇತ್ರದ ಸೀಬೆವಾಡಿಯಲ್ಲಿ ಕೂಡ ರೇಷ್ಮೆ ತರಬೇತಿ ಕೇಂದ್ರವಿದೆ. ಅದರಲ್ಲಿ ಹಿಂದೆ ಏಶ್ವಬ್ಯಾಂಕ್ ನರವಿನಿಂದ ಬೇಕಾದಷ್ಟು ಕಟ್ಟಡ

ಇತ್ಯಾದಿಗಳನ್ನು ನಿರ್ಮಿಸಿದ್ದಾರೆ. ಅದಕ್ಕೆ ಸುಮಾರು 30-40 ಎಕರೆಗಳಷ್ಟು ಜಮೀನು ಕೂಡ ಇದೆ. ಆದರೆ ಅಲ್ಲಿ ಯಾವುದೇ ಡೆವಲಪ್‌ಮೆಂಟ್ ನಡೆಯಲು ಅವಕಾಶವಾಗಲಿಲ್ಲ. ಅಲ್ಲಿ ತಾತ್ಕಲಿಕವಾಗಿ ಕೆಲಸ ಮಾಡುತ್ತಿದ್ದವರನ್ನು ಕನ್‌ಫರ್ಮ್ ಮಾಡಿ ಪಂಚಾಯತ್ ಸೆಕ್ರೆಟರಿಗಳಾಗಿ ಮಾಡಿದ್ದಾರೆ. ಅವರಿಗೆ ಪಂಚಾಯತ್ ಕೆಲಸ ಮಾಡುವುದಕ್ಕೂ ತರಬೇತಿ ಇಲ್ಲ, ರೇಷ್ಮೆ ಕೃಷಿ ಕೆಲಸ ಕಾರ್ಯವನ್ನೂ ಕೂಡ ಮಾಡುವಂತಿಲ್ಲ. ಹೀಗಾಗಿ ಆ ಫಾರಂಗಳನ್ನು ಮುನ್ನೆಡೆ ಮಾಡಲು ನುರಿತವರು ಇಲ್ಲದಂತಾಗಿದೆ. ಈಗ ಇರುವವರನ್ನು ಹೊರ ಇಲಾಖೆಗಳಿಗೆ ಕಳುಹಿಸಿ ಈಗ ಮತ್ತೆ ಕಾಂಟ್ರಾಕ್ಟ್ ಆಧಾರದ ಮೇಲೆ ನೇಮಿಸಿಕೊಳ್ಳುವ ಅವಶ್ಯಕತೆ ಏನಿತ್ತು? ಹಾಗೆಯೇ ನಮ್ಮ ಫಾರಂಗೆ ತಾವುಗಳು ಭೇಟಿ ಕೊಟ್ಟಿದ್ದೀರಾ ಎಂಬ ಬಗ್ಗೆ ಹೇಳಬೇಕು.

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೇ, ನಮ್ಮ ಪ್ರದೇಶದಲ್ಲಿ ರೇಷ್ಮೆ ಬೆಳೆ ಇದೆ. ಆ ಬೆಳೆಯನ್ನು ಲಾಭದಾಯಕವಾಗಿ ಬೆಳೆಯ ಬಹುದೆಂಬುದನ್ನು ಇವರು ಎಲ್ಲಾ ಕಡೆಗಳಲ್ಲಿ ಪ್ರಚಾರ ಮಾಡಬೇಕು. ಇವರೇ ಅಲ್ಲಿ ರೇಷ್ಮೆಯನ್ನು ಬೆಳೆದು ಲಾಭ ಮಾಡಿ ಜನರಿಗೆ ತೋರಿಸಬೇಕು. ಹಾಗೆ ಮಾಡುವುದರಿಂದ ಜನರಿಗೆ ನಂಬಿಕೆ ಬರುತ್ತದೆಯಲ್ಲವೆ? ಆದ್ದರಿಂದ ಅಲ್ಲಿ ರೇಷ್ಮೆ ಬೆಳೆದು ಲಾಭ ನಷ್ಟವಿಲ್ಲದ ರೀತಿಯಲ್ಲಾದರೂ ಬೆಳೆಸಿ ಜನರಿಗೆ ಕೃಷಿಯ ಬಗ್ಗೆ ಉತ್ಸಾಹ ಉಂಟಾಗುವ ರೀತಿಯಲ್ಲಿ ಮಾಡಲು ಇಲಾಖೆಯು ಯಾವ ಕ್ರಮಗಳನ್ನು ತೆಗೆದುಕೊಂಡಿದ ಎಂಬುದನ್ನು ದಯವಿಟ್ಟು ಸದನಕ್ಕೆ ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಎಂ.ಮಹದೇವ್: ಮಾನ್ಯ ಅಧ್ಯಕ್ಷರೇ, ರೇಷ್ಮೆಯನ್ನು ನಾವೇ ಬೆಳೆಯುವುದಿಲ್ಲ. ರೇಷ್ಮೆ ಬೆಳೆಯುವುದಕ್ಕೆ ಏನೇನು ಪ್ರೋತ್ಸಾಹವನ್ನು ಕೊಡಬೇಕೋ ಅದನ್ನು ನಾವು ಕೊಡುತ್ತೇವೆ. ಕಡ್ಡಿ ಕೊಡತಕ್ಕಂಥಾದ್ದು, ತರಬೇತಿ ಕೊಡತಕ್ಕಂಥಾದ್ದು ಫೆಸ್ಟಿಸೈಡ್ ಹೊಡೆಯತಕ್ಕಂಥಾದ್ದು ಮತ್ತು ಯಾವರೀತಿಯಲ್ಲಿ ಅದನ್ನು ಬೆಳೆಯಬೇಕೆಂಬುದರ ಬಗ್ಗೆ ನಮಗೆ ತಿಳಿಸಲು ನಮ್ಮ ಫಾರಂಗಳು ಇರತಕ್ಕಂಥಾದ್ದು. ಅದನ್ನು ಬಿಟ್ಟು ನಾವೇ ಬೆಳೆದು ನಾವೇ ಮಾದರಿಯಾಗಿ ಮಾಡಬೇಕೆಂದು ಅಲ್ಲ. ಅವರಿಗೆ ನಾವು ಸೌಕರ್ಯಗಳನ್ನು ಕೊಟ್ಟು ಅವರು ಮಾದರಿಯಾಗಿ ಬೆಳೆಯಲು ನಾವು ಸಹಕಾರ ಮಾಡುತ್ತೇವೆ. ಹಾಗೆಯೇ ಮಾನ್ಯ ಕೃಷ್ಣಮೂರ್ತಿಯವರು ಮತ್ತು ಮಹದೇವ ಪ್ರಸಾದ್‌ರವರು ವಿಷಯವನ್ನು ಪ್ರಸ್ತಾಪಿಸಿದ್ದಾರೆ. ನಾವು ಎಲ್ಲೆಲ್ಲಿ ಸಿಬ್ಬಂದಿ ಕೊರತೆ ಇದೆ ಅದನ್ನು ಭರ್ತಿ ಮಾಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳಲು ವಿಚಾರ ಮಾಡುತ್ತಿದ್ದೇವೆ. ಫಾರಂಗಳಲ್ಲಿ ನಾವು ಅಧಿಕಾರಿಗಳನ್ನು ನೇಮಿಸಿಕೊಳ್ಳುವುದಿಲ್ಲ. ಬೇರೆಯವರನ್ನು ಅಂದರೆ ಲೇಬರ್ಸ್‌ಗಳನ್ನು ನೇಮಿಸಿಕೊಳ್ಳಲು ಸಾಧ್ಯವಾದೀತು. ಲೇಬರ್ಸ್‌ಗಳನ್ನು ನೇಮಿಸಿಕೊಂಡಾಗ ಮಾತ್ರ ಫಾರಂಗಳನ್ನು ಚೆನ್ನಾಗಿ ಇಟ್ಟುಕೊಳ್ಳಬಹುದು. ಇದನ್ನು

ಕಾಂಟ್ರಾಕ್ಟ್ ಆಧಾರದ ಮೇಲೆ ಮಾಡಲು ಸಾಧ್ಯವೇ ಎಂಬುದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಮಹದೇವಪ್ರಸಾದ್‌ರವರು ತಮ್ಮ ಕ್ಷೇತ್ರದಲ್ಲಿ ಫಾರಂ ಇದ ಅದನ್ನು ಏನಾದರೂ ಅಭಿವೃದ್ಧಿ ಮಾಡಿ ಎಂದು ಹೇಳಿದ್ದಾರೆ. ಆ ಕೇಂದ್ರವನ್ನು ಇಂಪ್ರೂವ್‌ಮೆಂಟ್ ಮಾಡಲು ಅಲ್ಲಿ ನೀರಿನ ಸೌಲಭ್ಯ ಮತ್ತು ಬೇರೆ ಬೇರೆ ಅನುಕೂಲತೆಗಳು ಇದ್ದಲ್ಲಿ ಅದನ್ನು ಪರಿಶೀಲನೆ ಮಾಡುತ್ತೇವೆ. ಹಿಂದೆ ಅಲ್ಲಿ ಬಿಲ್ಡಿಂಗ್‌ಗಳು ಇದ್ದುವು. ಆ ವಿಚಾರ ತಮಗೂ ಗೊತ್ತಿದೆ. ವಿಶ್ವಬ್ಯಾಂಕ್‌ನಿಂದ ಬಂದ ಹಣವನ್ನು ಇನ್‌ಫ್ರಾಸ್ಟ್ರಕ್ಚರ್‌ನ್ನು ಕ್ರಿಯೇಟ್ ಮಾಡುವುದಕ್ಕೋಸ್ಕರ ಕಟ್ಟಡಗಳ ಮೇಲೆ, ಜಪಾನ್, ಚೈನಾ ಮೆಷಿನರೀಸ್‌ಗಳ ಮೇಲೆ, ವಾಹನಗಳ ಮೇಲೆ, ಹಣವನ್ನು ಖರ್ಚು ಮಾಡಿದ್ದಾರೆ. ಅದೇ ಹಣವನ್ನು ಡೆವಲಪ್‌ಮೆಂಟ್ ಸೈಡ್ ಹಾಕದೆ ಹೀಗೆ ಖರ್ಚು ಮಾಡಿದ್ದಾರೆ. ಹೀಗೆ ಮಾಡಿದ ಇನ್‌ವೆಸ್ಟ್‌ಮೆಂಟ್‌ಗೆ ರಿಟರ್ನ್ಸ್ ಇಲ್ಲದ ಹಾಗೆ ಆಯಿತು. ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಸದುದ್ದೇಶದಿಂದ ಹಣ ಖರ್ಚು ಮಾಡಿದ್ದರು. ಇವೊತ್ತು ನಾವು ಅದೇ ಕಟ್ಟಡಗಳನ್ನು ರಿಪೇರಿ ಮಾಡುವ ಸ್ಥಿತಿಯಲ್ಲಿಲ್ಲ. ಅದರ ಆವಶ್ಯಕತೆಯೂ ನಮಗೆ ಇಲ್ಲ. ಆ ದೃಷ್ಟಿಯಿಂದ ಎಲ್ಲೆಲ್ಲಿ ಫಾರಂಗಳಲ್ಲಿ ಕಟ್ಟಡಗಳು, ಬೇರೆ ಬೇರೆ ಸೌಕರ್ಯಗಳಿದ್ದಾವೋ ಅವುಗಳನ್ನು ಐಡಲ್ ಆಗಿ ಇಡಬಾರದೆಂಬ ಉದ್ದೇಶದಿಂದ ಅದನ್ನು ಪೈವೇಟೈಸ್ ಮಾಡಬೇಕೆಂಬ ಚಿಂತನೆಯಲ್ಲಿ ಸರಕಾರ ವಿಚಾರ ನಡೆಸಿದೆ.

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಸಣ್ಣ ಕೈಗಾರಿಕೆ ಅಭಿವೃದ್ಧಿ

222(2480)

ಶ್ರೀ ಸಂಪಂಗಿ ಎನ್.(ಬಾಗೇಪಲ್ಲಿ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗಾರಿಕಾ ನಗರವನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ ಯಾವಾಗ ಇದು ಕಾರ್ಯರೂಪಕ್ಕೆ ಬರುತ್ತದೆ;

ಆ) ಈ ವಿಧಾನಸಭಾ ಕ್ಷೇತ್ರದಲ್ಲಿ ಕೈಗಾರಿಕಾ ಮಳಿಗೆಗಳನ್ನು ಇತ್ತೀಚಿನ ದಿನಗಳಲ್ಲಿ ನಿರ್ಮಿಸಲಾಗಿದೆಯೇ ಹಾಗಿದ್ದಲ್ಲಿ ಅವುಗಳು ಯಾವುವು;

ಅವುಗಳನ್ನು ಎಲ್ಲೆಲ್ಲಿ ಹಾಗೂ ಎಷ್ಟು ವೆಚ್ಚದಲ್ಲಿ ನಿರ್ಮಿಸಲಾಗಿದೆ? (ವಿವರ ನೀಡುವುದು).